

ಎಕರೆ ಭೂಮಿ ಇತ್ತು. ಚಿಕ್ಕದೊಂದು ಮನೆಯಿತ್ತು. ಶಾರದಾ ಎಸ್.ಎಸ್.ಎಲ್.ಸಿ.ವರೆಗೆ ಓದಿದ್ದಳು. ಕೊಳ್ಳೇಗಾಲ ಅವಳಿಗೆ ಸ್ವರ್ಗವೆನ್ನಿಸಿತ್ತು. ಅವಳ ತಂದೆ–ತಾಯಿ ನಂಜನಗೂಡಿನ ಹತ್ತಿರದ ಪಾಳ್ಯದಲ್ಲಿದ್ದರು. ಶಾರದೆ, ಶಾರದೆಯ ಅಣ್ಣ ಪ್ರಭಾಕರ ಕೃಷಿ ಜೊತೆ ಹಾಲಿನ ಡೈರಿ ನಡೆಸುತ್ತಿದ್ದ. ಹುಡುಗ ಗೌರ್ನಮೆಂಟ್ ಕೆಲಸದಲ್ಲಿದ್ದಾನೆ. ಜೀವನ ನಿರ್ವಹಣೆ ಕಷ್ಟವಾಗದು ಎಂದು ಮಗಳನ್ನು ಕೊಟ್ಟಿದ್ದರು.

ಶಾರದಾ ಮದುವೆಯಾದ ವರ್ಷದಲ್ಲೇ ಶಿವು ಹುಟ್ಟಿದ್ದ. ಶಿವೂಗೆ ನಾಲ್ಕು ವರ್ಷಗಳಾಗಿದ್ದಾಗ ರಾಜೇಶ ಹುಟ್ಟಿದ್ದ. ರಾಜೇಶನಿಗೆ ಆರು ವರ್ಷವಾಗಿದ್ದಾಗ ಕಲ್ಯಾಣಿ ಹುಟ್ಟಿದ್ದಳು. ಮೂವರೂ ಕೊಳ್ಳೇಗಾಲದಲ್ಲೇ ಶಾಲೆಗೆ ಸೇರಿದ್ದರು. ಶಿವಶಂಕರ ಎಂಟನೇ ತರಗತಿಯಲ್ಲಿದ್ದ. ರಾಜೇಶ ಐದನೇ ತರಗತಿಯಲ್ಲಿದ್ದ. ಕಲ್ಯಾಣಿ ಹತ್ತಿರದ ಕಾನ್ವೆಂಟ್‌ಗೆ ಹೋಗುತ್ತಿದ್ದಳು. ಆಗ ಸರಸ್ವತಿಯ ಆಗಮನವಾಗಿತ್ತು.

ಸರಸ್ವತಿ ಪ್ರೌಢಶಾಲಾ ಉಪಾಧ್ಯಾಯಿನಿಯಾಗಿ ತಾವರೆಕಟ್ಟೆ ಪ್ರವೇಶಿಸಿದ್ದಳು. ಅವಳು ಮೈಸೂರಿನಿಂದ ಬಸ್‌ನಲ್ಲಿ ಬಂದು ತಾವರೆಕಟ್ಟೆಯ ಬಸ್ಸು ಹಿಡಿಯಬೇಕಾಗಿತ್ತು. ಸಾಯಂಕಾಲ ಮೈಸೂರು ತಲುಪುವುದು ತುಂಬಾ ತಡವಾಗುತ್ತಿತ್ತು.

'ಸರ್, ಕೊಳ್ಳೇಗಾಲದಲ್ಲಿ ಚಿಕ್ಕ ಮನೆ ಸಿಗುತ್ತದೆಯಾ?' ಸರಸ್ವತಿ ಪ್ರಶ್ನಿಸಿದ್ದಳು.

'ಸಿಗುತ್ತದೆ ಮೇಡಂ. ಆದರೆ ವಠಾರದ ಮನೆಗಳು. ಇಂಡಿಪೆಂಡೆಂಟ್ ಮನೆಗಳಿಗೆ ಬಾಡಿಗೆ ಜಾಸ್ತಿ'.

'ಎಲ್ಲೂ ಪೇಯಿಂಗ್ ಗೆಸ್ಟ್ ಅಕಾಮಡೇಷನ್ ಸಿಗಲ್ವಾ?'

ಗಂಗಾಧರನ ತಲೆ ಚುರುಕಾಗಿ ಓಡಿತ್ತು. ಅವನಿರುವ ಮನೆಯಲ್ಲಿ ಮೂರು ರೂಮುಗಳಿದ್ದವು. ಒಂದು ರೂಮ್‌ಗೆ ಸೇರಿದಂತೆ ವಾಷ್‌ರೂಂ ಇತ್ತು. ಅವನು ಹಟ ಮಾಡಿ ಹೆಂಡತಿಯನ್ನು ಒಪ್ಪಿಸಿದ್ದ.

'ತಿಂಗಳಿಗೆ ಅವರು ಐದು ಸಾವಿರ ಕೊಡಲಿ. ಆ ಹಣ ನೀನೇ ತೊಗೋ. ನಮ್ಮ ಜೊತೆ ಊಟ, ತಿಂಡಿ ಮಾಡ್ತಾರೆ. ಶನಿವಾರ, ಭಾನುವಾರ ಊರಿಗೆ ಹೋಗ್ತಾರೆ'.

ಶಾರದಾಗೆ ಖುಷಿಯಾಗಿತ್ತು. ತಿಂಗಳಿಗೆ ಐದು ಸಾವಿರ ಯಾರಿಗೆ ಬೇಡ? ಸರಸ್ವತಿಯ ಆಗಮನವಾಯಿತು. ಅವಳು ಯಾವ ಕೆಲಸಕ್ಕೂ ಕೈ ಹಾಕುತ್ತಿರಲಿಲ್ಲ. ಆದರೆ ಸಾಯಂಕಾಲ ಹಟಕ್ಕೆ ಬಿದ್ದವಳಂತೆ ಮಕ್ಕಳನ್ನು ಕೂಡಿಸಿಕೊಂಡು ಪಾಠ ಹೇಳುತ್ತಿದ್ದಳು. ಹೋಂ ವರ್ಕ್ ಮಾಡಿಸುತ್ತಿದ್ದಳು. ಮಕ್ಕಳು ಒಳ್ಳೆಯ ಅಂಕ ಗಳಿಸಲು ಆರಂಭಿಸಿದರು. ನಂತರ ಒಮ್ಮೆ ಮೈಸೂರಿನಿಂದ ಬರುವಾಗ ದೊಡ್ಡ ಬಣ್ಣದ ಟಿ.ವಿ. ತಂದಳು. ಶಾರದಾಗೆ, ಮಕ್ಕಳಿಗೆ ಖುಷಿಯೋ ಖುಷಿ!

ಆರು ತಿಂಗಳಾದ ಮೇಲೆ ಒಂದು ಸಾಯಂಕಾಲ ಮಾತನಾಡುತ್ತಾ ಕುಳಿತಿದ್ದಾಗ ಹೇಳಿದಳು. 'ಶಾರದಮ್ಮ, ಮೇಷ್ಟ್ರು ಬೈಕ್ ತೆಗೆದುಕೊಂಡರೆ ತಾವರೆಕಟ್ಟೆಗೆ ಬಸ್‌ನಲ್ಲಿ ಓಡಾಡೋದು ತಪ್ಪುತ್ತೆ. ತುಂಬಾ ಟೈಂ ಉಳಿಯತ್ತೆ. ಏನಂತೀರಾ?'

'ಬೈಕ್‌ಗೆ ಐವತ್ತು ಸಾವಿರವಾದರೂ ಬೇಕು. ಯಾರು ಕೊಡ್ತಾರೆ?'

'ನಾನು ಕೊಡ್ತೀನಿ. ನೀವು ನಿಧಾನವಾಗಿ ವಾಪಸ್ಸು ಮಾಡಿ'.

'ನಿಮಗ್ಯಾಕೆ ತೊಂದರೆ?'

'ಇದರಲ್ಲಿ ತೊಂದರೆ ಏನ್ಬಂತು? ಅವರು ಬೈಕ್ ತೆಗೆದುಕೊಂಡರೆ ನನಗೂ ಅನುಕೂಲ ಅಲ್ವಾ?'

ಶಾರದಾ ಒಪ್ಪಲೇಬೇಕಾಯ್ತು. ಬೈಕ್‌ನಲ್ಲಿ ಗಂಗಾಧರ–ಸರಸ್ವತಿಯರ ಓಡಾಟ ಶುರುವಾಯಿತು. ಸರಸ್ವತಿ ಶಾಲೆಯಲ್ಲೂ ಒಳ್ಳೆಯ ಹೆಸರು ತೆಗೆದುಕೊಂಡಿದ್ದಳು. ಮಕ್ಕಳಿಗೆ ಹಾಡು, ಡ್ಯಾನ್ಸ್, ನಾಟಕ, ಏಕಪಾತ್ರಾಭಿನಯ ಎಲ್ಲಾ ಹೇಳಿಕೊಡುತ್ತಿದ್ದಳು. ಆರು ತಿಂಗಳು ಕಳೆಯುವುದರಲ್ಲಿ ಶಾರದಾಗೆ ಎರಡೆಳೆ ಸರ, ಒಂದು ಜೊತೆ ಬಳೆ ಮಾಡಿಸಿ ತಂದಳು.

'ಇದು ನಿಮಗೆ ತೆಗೆದುಕೊಳ್ಳಿ'.

'ನನಗ್ಯಾಕೆ?'

'ಹಾಕಿಕೊಳ್ಳಕ್ಕೆ. ಮದುವೆಯಾದ ಮೇಲೆ ಮೇಷ್ಟ್ರು ನಿಮಗೇನೂ ಮಾಡಿಸಿಕೊಟ್ಟಿಲ್ಲಾ ಅಲ್ವಾ? ಅದಕ್ಕೆ ಮಾಡಿಸಿದೆ. ಬೈಕ್ ಸಾಲ ಕಂತಿನಲ್ಲಿ ಕೊಡ್ತಿದ್ರು. ಅದನ್ನು ಸೇರಿಸಿ ಒಡವೆ ಮಾಡಿಸಿ ತಂದೆ'.

'ಮೇಷ್ಟ್ರು ಏನಂತಾರೋ ಏನೋ?'

'ಏನೂ ಅನ್ನಲ್ಲ. ನೀವು ಶ್ರೀಮಂತರ ಮನೆ ಮಗಳು. ಹೀಗೆ ಬಿಚ್ಚೋಲೆ ಗೌರಮ್ಮನ ತರಹ ಇದ್ದರೆ ಏನು ಚೆನ್ನಾಗಿರತ್ತೆ ಹೇಳಿ...'

'ಇದನ್ನೆಲ್ಲಾ ಹಾಕಿಕೊಂಡು ನಾನು ಎಲ್ಲಿಗೆ ಹೋಗಬೇಕು ಹೇಳಿ. ಹಳ್ಳಿ ಮದುವೆಗಳಿಗೆ ಹೋಗಕ್ಕೆ ಈಗ ಇರುವ ಒಡವೆ ಸಾಕು'.

'ನೀವು ಹೀಗಿದ್ರೆ ಆಗಲ್ಲ ಶಾರದಮ್ಮ. ಈ ಶನಿವಾರ ನೀವು ನನ್ನ ಜೊತೆ ಬನ್ನಿ. ನಾವು ಭಾನುವಾರ ವಾಪಸ್ಸು ಬರೋಣ. ಮಕ್ಕಳನ್ನು ಮೇಷ್ಟ್ರು ನೋಡಿಕೊಳ್ತಾರೆ'. ಶಾರದಾ, ಸರಸ್ವತಿ ಜೊತೆ ಮೈಸೂರಿಗೆ ಹೋಗಿದ್ದಳು. ಸರಸ್ವತಿ ಮನೆ ಕುವೆಂಪುನಗರದಲ್ಲಿತ್ತು. ಅವಳ ತಾಯಿ, ಅಣ್ಣ–ಅತ್ತಿಗೆ ಅವರ ಮಕ್ಕಳ ಪರಿಚಯವಾಯಿತು. ಸಾಯಂಕಾಲ ಶಾರದಾಳನ್ನು ಕರೆದುಕೊಂಡು ಸರಸ್ವತಿ ಬಟ್ಟೆ ಅಂಗಡಿಗೆ ಹೋಗಿ ಸಿಂಪಲ್ ಆಗಿರುವ ನಾಲ್ಕು ಸೀರೆ, ನಾಲ್ಕು ನೈಟಿ, ಒಳ ಉಡುಪು ಖರೀದಿಸಿದಳು.

'ನೀವು ಇನ್ನು ಮೇಲೆ ಇಂತಹ ಸೀರೆಗಳನ್ನು ಉಡಬೇಕು. ಸೀರೆಗೆ ಅಟ್ಯಾಚ್ ಆಗಿರುವ ಬ್ಲೌಸ್ ಹೊಲಿಯಕ್ಕೆ ಕೊಡ್ತೀನಿ. ರಾತ್ರಿ ನೈಟಿ ಹಾಕಿಕೊಳ್ಳಿ. ಆರಾಮವಾಗಿರತ್ತೆ'.

ಮರುದಿನ ಬೆಳಗ್ಗೆ ಸರಸ್ವತಿಯ ಪರಿಚಯದವರೊಬ್ಬರು ಬ್ಯೂಟಿ ಪಾರ್ಲರ್ ನಡೆಸುತ್ತಿದ್ದರು. ಅಲ್ಲಿಗೆ ಕರೆದೊಯ್ದು ಕೂದಲನ್ನು ಯು ಶೇಪ್‌ನಲ್ಲಿ ಕಟ್ ಮಾಡಿಸಿದಳು.

'ನಮ್ಮನೆಯವರು ಏನಂತಾರೋ ಏನೋ?'

'ಏನೂ ಅನ್ನಲ್ಲ. ನೀವು ಚೆನ್ನಾಗಿ ಕಾಣಿಸ್ತಿದ್ರೆ ಅವರಿಗೆ ಖುಷಿಯಾಗಲ್ವಾ? ಇನ್ನು ಮೇಲೆ ನೀವು ಕೂದಲಿಗೆ ರಿಬ್ಬನ್ ಕಟ್ಟುವುದು ಬಿಡಿ. ಕ್ಲಿಪ್ ಹಾಕಿ. ಹಣೆಗೆ ಬಿಂದಿ ಇಡಿ. ಕೈತುಂಬಾ ಯಾಕೆ ಬಳೆ ಹಾಕ್ತೀರಾ? ಚಿನ್ನದ ಬಳೆ ಜೊತೆ ಎರಡೆರಡು ಗಾಜಿನ ಬಳೆ ಹಾಕಿ ಸಾಕು'.

ಕನ್ನಡಿಯಲ್ಲಿ ತನ್ನನ್ನು ನೋಡಿಕೊಂಡ ಶಾರದಾ ಆಶ್ಚರ್ಯದಿಂದ ಬೆರಗಾಗಿದ್ದಳು. ತನ್ನ ರೂಪವೇ ಬದಲಾಗಿರುವಂತೆ ಅವಳಿಗೆ ತೋರಿತ್ತು. ಗಂಗಾಧರ ಅವಳನ್ನು ಏನೂ ಬೈಯಲಿಲ್ಲ. ಅವಳೊಬ್ಬಳೇ ಇದ್ದಾಗ ಕೆನ್ನೆ ಹಿಂಡಿ 'ಎಷ್ಟು ಚೆನ್ನಾಗಿ ಕಾಣುತ್ತೀಯಲ್ಲೇ ಶಾರಿ?' ಎಂದಿದ್ದ.

'ಶಾರದಮ್ಮ ನಾನು ಪ್ರತಿ ತಿಂಗಳೂ ಐದು ಸಾವಿರ ಕೊಡ್ತೀನಲ್ವಾ? ನೀವು ಪೋಸ್ಟ್ ಆಫೀಸ್‌ನಲ್ಲಿ ಆರ್.ಡಿ. ಶುರು ಮಾಡಿ. ತಿಂಗಳಿಗೆ ಎರಡು ಸಾವಿರ ಕಟ್ಟಿ. ನಿಮಗೆ ಸಮಯಕ್ಕೆ ಒದಗತ್ತೆ'.

ಶಾರದಾ ಒಪ್ಪಿದ್ದಳು.